**ದಿ: 12-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ವಿ ಆರ್ ಜಿ ವಕೀಲರಿಂದ:**

(1 ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲು: 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದ:**

ದಾವೆ ಹಾಕುವ ಮುಂಚೆ ನಾನು ನನ್ನ ತಾಯಿಯನ್ನು ವಿಚಾರಿಸಿಲ್ಲ. ಪ್ರತಿವಾದಿಯರು ಸಲ್ಲಿಸಿದ ತಕರಾರಿನ ಬಗ್ಗೆ ನಾನು ನೋಡಿಲ್ಲ. ನಮ್ಮ ತಾಯಿ ನಮ್ಮ ತಂದೆ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು ಎನ್ನುವದು ಗೊತ್ತಿಲ್ಲ. ನಮ್ಮ ತಾಯಿ ಕಲ್ಲಪ್ಪನ ಜೊತೆಗೆ ಸಂಸಾರ ಮಾಡಿದ್ದಳು ಎನ್ನುವ ಬಗ್ಗೆ ನಾನು ದಾಖಲೆಯನ್ನು ಹಾಜರ ಪಡಿಸಿಲ್ಲ. ನಾನು ನಮ್ಮ ತಂದೆ ತಾಯಿಯೊಂದಿಗೆ ವಾಸವಾಗಿದ್ದ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ನಮ್ಮ ತಾಯಿ ಜೀವನಾಂಶ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ ಕಲ್ಲಪ್ಪ ಇವರು ನಮ್ಮ ತಾಯಿಯನ್ನು

ಮದುವೆ ಆಗಿಲ್ಲ ಎಂದು ತಕರಾರು ಸಲ್ಲಿಸಿದ್ದ ಎನ್ನುವದು ನನಗೆ ಗೊತ್ತಿಲ್ಲ. ನಮ್ಮ ತಂದೆ ಮೇಲ್ಮನವಿ ಅರ್ಜಿ ನಂ **245/2008** ನ್ನು ಸಲ್ಲಿಸಿದ್ದು ಸದರಿ ಅರ್ಜಿ ಪುರಸ್ಕೃತಗೊಂಡು ಜೀವನಾಂಶದ ಅರ್ಜಿ ವಜಾಗೊಂಡಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ನಮ್ಮ ತಾಯಿ ತನ್ನ ಗಂಡನ ಜೊತೆಗಿನ ವೈವಾಹಿಕ ಸಂಬಂಧವನ್ನು ರುಜುವಾತು ಪಡಿಸಲು ವಿಫಲರಾಗಿದ್ದಾಳೆಂದು ಅರ್ಜಿ ವಜಾಗೊಂಡಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದಾರೆ. ಇಂದು ನ್ಯಾಯಾಲಯಕ್ಕೆ ನಮ್ಮ ತಾಯಿ ಬಂದಿರುವುದು ನನಗೆ ಗೊತ್ತಿಲ್ಲ. ನನ್ನ ಹಾಗೂ ನಮ್ಮ ತಾಯಿ ಮದ್ಯ ಒಳ್ಳೆಯ ಸಂಬಂಧ ಇದೆ. ನಮ್ಮ ತಾಯಿ ಈಗ ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಮ್ಮ ತಾಯಿ ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿದ್ದ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ.

ನಮ್ಮ ತಾಯಿ ಖಾಯಂ ತರೀಖ ದುಮ್ಮವಾಡ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಅಂದರೆ ಸಾಕ್ಷಿ ಗಂಡನ ಮನೆ ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿದ್ದು ತವರು ಮನೆ ದುಮ್ಮವಾಡಕ್ಕೆ ಬಂದು ಹೋಗಿ ಮಾಡುತ್ತಾರೆ ಎನ್ನುತ್ತಾರೆ. **2021** ರಲ್ಲಿ ನನ್ನ ಮದುವೆ ಆಗಿತ್ತು. ನಾನು **10-11** ನೇ ವಯಸ್ಸಿನಲ್ಲಿ ಪ್ರೀತಿಸಿ ಮದುವೆ ಆಗಿದ್ದೇನೆ. ನಮ್ಮ ಮದುವೆ ಧರ್ಮಸ್ಥಳದಲ್ಲಿ ಆಗಿರುತ್ತದೆ. ಮದುವೆ ಸಮಯದಲ್ಲಿ ನಮ್ಮ ತಂದೆ ತಾಯಿ ಹಾಜರ ಇರಲಿಲ್ಲ. ಮದುವೆಯ ಆಮಂತ್ರಣ ಪತ್ರಿಕೆ ತಯಾರಿಸಿರಲಿಲ್ಲ. ನಾನು ಮದುವೆ ಆಗುವ ಮುಂಚೆ ಬಿ ಗುಡಿಹಾಳ ಗ್ರಾಮದಲ್ಲಿ ವಾಸವಾಗಿದ್ದೆ. ನಾನು ಗುಡಿಹಾಳ ಗ್ರಾಮದಲ್ಲಿ ವಾಸವಾಗಿದ್ದೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಶಾಲೆಯ ಪ್ರಮಾಣ ಪತ್ರ ಇರುತ್ತದೆ. ನಮ್ಮ ತಂದೆ ಸುಧಾ ಇವರೊಂದಿಗೆ ವಾಸವಾಗಿದ್ದಿರಬಹುದು. ಕಲ್ಲಪ್ಪನ ಜೊತೆಗೆ ಸುಧಾ ವಾಸವಾಗಿದ್ದಾಳೆಂದು ನಾವು ವಿಚಾರಿಸಿಲ್ಲ. ಆಗ ನಾನು ವಿಚಾರಿಸಿರಲಿಲ್ಲ. ನನಗೆ ಬುದ್ದಿ ಬಂದ ನಂತರ ನಾನು ಬೇರೆ ಮದುವೆ ಆಗಿದ್ದು ಯಾವುದೆ ವಿಚಾರ ಮಾಡಿಲ್ಲ. ನಾನು ಕೆಳಗಿನ ಜಾತಿಯವರನ್ನು ಮದುವೆ ಆಗಿದ್ದರಿಂದ ನನ್ನನ್ನು ಹೆದರಿಸಿ ಬೆದರಿಸಿದ್ದರಿಂದ ನಾನು ತಂದೆ ಮನೆಯೊಂದಿಗೆ ಸಂಪರ್ಕ ಹೊಂದಿರಲಿಲ್ಲ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸುಧಾ ಇವರು ಬಿ ಗುಡಿಹಾಳ ಮನೆಯಲ್ಲಿ ಕಲ್ಲಪ್ಪನೊಂದಿಗೆ ವಾಸವಾಗಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಆದರೆ ನಮ್ಮ ತಂದೆ ನಮ್ಮ ತಾಯಿ ಜೊತೆಗೆ ನ್ಯಾಯ ಮಾಡಿದ್ದರಿಂದ ಸುಧಾಳ ಜೊತೆಗೆ ವಾಸವಾಗಿದ್ದಾನೆಂದು ಕೇಳಿರುತ್ತೇನೆ.

ಕಲ್ಲಪ್ಪನ ಜೀವಿತ ಕಾಲದಲ್ಲಿ **2** ರಿಂದ **4** ನೇ ಪ್ರತಿವಾದಿಯರು ಬಿ ಗುಡಿಹಾಳ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಅವರನ್ನು ನಾನೆ ಜೋಪಾನ ಮಾಡಿದ್ದೇನೆ ಎನ್ನುತ್ತಾರೆ. ನಾನು ನನ್ನ ನಮ್ಮ ತಂದೆಯನ್ನು ವಿಚಾರಣೆ ಮಾಡಿಲ್ಲ, ಏಕೆಂದರೆ ಅವರು ನಮ್ಮೊಂದಿಗೆ ಚನ್ನಾಗಿ ಇದ್ದರು. ನಾನು **2** ರಿಂದ **4** ನೇ ಪ್ರತಿವಾದಿಯರ ಬಗ್ಗೆ **1** ನೇ ಪ್ರತಿವಾದಿಯನ್ನು ವಿಚಾರಿಸಿಲ್ಲ. ನಮ್ಮ ತಂದೆ ಮೊದಲನಿಂದಲೂ ಸುಧಾ ಹಾಗೂ **2** ರಿಂದ **4** ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದ ಎನ್ನುವದು ನನಗೆ ಗೊತ್ತಿತ್ತು. ಕಲ್ಲಪ್ಪ ಮರಣ

ಹೊಂದಿದ ನಂತರ ನಾನು ಶವ ಸಂಸ್ಕಾರಕ್ಕೆ ಹೋಗಿರುತ್ತೇನೆ. 2 ನೇ ಪ್ರತಿವಾದಿಯು ನನ್ನ ತಂದೆಯ ಕ್ರಿಯಾಕರ್ಮಗಳನ್ನು ಮಾಡಿರಬಹುದು.

ನಮ್ಮ ತಂದೆ ಮರಣ ಹೊಂದಿದ ನಂತರ 2 ರಿಂದ 4 ನೇ ಪ್ರತಿವಾದಿಯರ ಹೆಸರುಗಳು ಉತಾರಗಳಲ್ಲಿ ದಾಖಲಾಗಿರುತ್ತವೆ ಅಂದರೆ ನಿಜ. ನಾನು ತಕರಾರು ಮಾಡಿರಲಿಲ್ಲ ಏಕೆಂದರೆ ಆಗ ನಮಗೆ ಗೊತ್ತಿರಲಿಲ್ಲ. ದಾವಾ ಆಸ್ತಿಗಳನ್ನು 2 ನೇ ಪ್ರತಿವಾದಿ ವಹಿವಾಟು ಮಾಡುತ್ತಾನೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮಗೆ ಬರಲು ಕೊಡುತ್ತಿಲ್ಲ ಅನ್ನುತ್ತಾರೆ. 1 ನೇ ಪ್ರತಿವಾದಿ ಸಲ್ಲಿಸಿದ ತಕರಾರಿನ ಬಗ್ಗೆ ಗೊತ್ತಿಲ್ಲ. ನಮ್ಮ ತಂದೆಯನ್ನು ಮದುವೆ ಆಗಿರುವ ವಿಷಯ ನನಗಿಂತಲೂ ಹೆಚ್ಚಿಗೆ ನಮ್ಮ ತಾಯಿಗೆ ಗೊತ್ತಿರುತ್ತದೆ ಎಂದರೆ ನಿಜ. ನಮ್ಮ ತಾಯಿಯನ್ನು ಅವರ ಮದುವೆ ಬಗ್ಗೆ ವಿಚಾರಿಸಿದ್ದೇನೆ. ಸದರಿಯವರು ಸೋದರ ಮಾವನನ್ನು ಮದುವೆ ಆಗಿರುತ್ತಾರೆ. ತನ್ನ 8 ನೇ ವಯಸ್ಸಿನಲ್ಲಿ ನಮ್ಮ ತಾಯಿ ಮದುವೆ ಆಗಿರುತ್ತಾರೆ. ನಾನು ಮದುವೆ ವಿಷಯಗಳನ್ನು ನಮ್ಮ ತಾಯಿಯಿಂದ ಕೇಳಿಲ್ಲ. ನಮ್ಮ ತಾಯಿ ಕಲ್ಲಪ್ಪನನ್ನು ಮದುವೆ ಆಗಿರಲಿಲ್ಲ ಈ ವಿಷಯ ನನಗೂ ಸಹ ಗೊತ್ತಿದೆ, ಆದ್ದರಿಂದ ನಾನು ನಮ್ಮ ತಾಯಿಯಿಂದ ಯಾವುದೆ ವಿಷಯ ಕೇಳಿಲ್ಲ ಅಂದರೆ ಸರಿಯಲ್ಲ. ನಮ್ಮ ತಾಯಿ ಅಣ್ಣ ತಮ್ಮಂದಿರು ಜೀವಂತವಾಗಿದ್ದಾರೆ. ಅವರನ್ನು ಸಾಕ್ಷಿ ವಿಚಾರಣೆ ಮಾಡಿದರೆ ನನ್ನ ಪರವಾಗಿ ಹೇಳುತ್ತಾರೆ ಎನ್ನುವದರ ಬಗ್ಗೆ ಗೊತ್ತಿಲ್ಲ. ನಮ್ಮ ತಾಯಿ ಅಣ್ಣ ತಮ್ಮಂದಿರ ಜೊತೆಗೆ ನನಗೆ ವೈರತ್ವ ಇರುವುದಿಲ್ಲ. ದಾವೆ ಸಲ್ಲಿಸುವ ಮುಂಚೆ ನಮ್ಮ ಅಜ್ಜಿ ಮನೆಯಲ್ಲಿ ವಿಚಾರಿಸಿಲ್ಲ. ಕಲ್ಲಪ್ಪ ಸುಧಾಳನ್ನು ಮಾತ್ರ ಮದುವೆ ಆಗಿದ್ದ ಅಂದರೆ ಸರಿಯಲ್ಲ. ನಮ್ಮ ತಾಯಿ 1 ನೇ ಪ್ರತಿವಾದಿಯನ್ನು ಕಲ್ಲಪ್ಪ ಎಂದಿಗೂ ಮದುವೆ ಆಗಿರಲಿಲ್ಲ ಅಂದರೆ ಸರಿಯಲ್ಲ. ಸುಧಾ ಕಲ್ಲಪ್ಪ 2 ನೇ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸುಧಾಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸುಧಾ ಇವಳು ನಮ್ಮ ತಂದೆ ಜೊತೆಗೆ ಕಾನೂನುಬಾಹಿರವಾಗಿ ವಾಸವಾಗಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯನ್ನು ಪಾಲು ಕೇಳಿದಾಗ ಅವರು 2 ನೇ ಪ್ರತಿವಾದಿಯರನ್ನು ವಿಚಾರಿಸಿ ಪಾಲು ಕೊಡುತ್ತೇನೆಂದು ಮುಂದೂಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ.

ಬಿ ಗುಡಿಹಾಳ ಗ್ರಾಮದಲ್ಲಿ ಪ್ರತಿವಾದಿಯರ ಮನೆ ಪಕ್ಕ ಬೇರೆ ಮನೆಗಳು ಇರುತ್ತವೆ. ಜಿನ್ನಮ್ಮನವರ ಮನೆ, ಸಂಕಪ್ಪನವರ ಮನೆ, ಅದರ ಮುಂದೆ ಮಾದೆಪ್ಪನವರ ಇವರಿಗೆ ಸೇರಿದ ಮನೆಗಳು ಇರುತ್ತವೆ. ಅಕ್ಕಪಕ್ಕದವರ ಮನೆಯವರೊಂದಿಗೆ ನಮ್ಮ ಜೊತೆ ಸಂಬಂಧ ಚನ್ನಾಗಿ ಇದೆ. ಸಾಕ್ಷಿ ಮುಂದುವರೆದು ನನ್ನನ್ನು ತವರು ಮನೆಗೆ ಬರಲು ಬಿಟ್ಟಿರುವುದಿಲ್ಲ ನಾನು ಈಗ ತವರು ಮನೆಗೆ ಹೋಗುವುದಿಲ್ಲ ಎನ್ನುತ್ತಾರೆ. ನಮ್ಮ ತಾಯಿ ಕಲ್ಲಪ್ಪನ ಜೊತೆಗೆ ಸಂಸಾರ ಮಾಡಿದ್ದಳು ಎಂದು ತೋರಿಸಲು ಅಕ್ಕಪಕ್ಕದವರನ್ನು ವಿಚಾರಣೆ ಮಾಡಬಹುದೆ**?** ಎಂದರೆ ಸಾಕ್ಷಿ ಯಾರು ಸಾಕ್ಷಿ ಹೇಳಲು ಮುಂದೆ ಬರುವುದಿಲ್ಲ ಎನ್ನುತ್ತಾರೆ. ಸುಧಾ ಯಾವ ಊರಿನವಳು ಎನ್ನುವದು ನನಗೆ ಗೊತ್ತಿಲ್ಲ. ಕಲ್ಲಪ್ಪ ಇವರು ನಮ್ಮ ತಾಯಿ ಶಾಂತವ್ವಳನ್ನು ಎಂದಿಗೂ

ಮದುವೆ ಅಗಿರಲಿಲ್ಲ ಹಾಗೂ ಅವರ ಮದ್ಯ ವೈವಾಹಿಕ ಸಂಬಂಧ ಇರುವುದಿಲ್ಲ ಅಂದರೆ ಸರಿಯಲ್ಲ. ಕಲ್ಲಪ್ಪ ಇವರು ಸುಧಾಳನ್ನು ವದುವೆ ಆಗಿದ್ದು ಅವರಿಗೆ 2 ರಿಂದ 4 ನೇ ಪ್ರತಿವಾದಿಯರು ಮಕ್ಕಳು ಎನ್ನುವ ವಿಷಯ ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೇರೆಯವರ ಮಾತು ಕೇಳಿ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳಲು ಪ್ರಯತ್ನ ಮಾಡಿ ಬಿಟ್ಟಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**